## I.A.D.P. AND I.A.A.P. SCHEMES

465. SRI G PUTTASWAMY (Mudigere).—

Will the Minister for Agriculture and Forests be pleased to state :—

(*a*) the names of I.A.D.P. and I.A.A.P. Schemes that are working in different districts ;

(*b*) the basis on which the I.A.A.P. and I.A.D P. programmes are introduced now and previously and when ;

(*c*) the reason for not including I.A.A.P. and Small Farmers Development Agency programmes in Chickmagalur, Coorg and Hassan Districts ;

(*d*) whether it has come to the notice of the Government that there are large number of small holding farmers in Chickmagalur district who are facing much difficulties in getting adequate loan in time and technical know-how to get better yield to improve their financial condition ?

SRI K. H. PATIL (Minister for Agriculture and Forests).—

(*a*) 1. District Intensive Agricultural Development Programme, Mandya District.

Regional Intensive Agricultural Development programme—T. B. Scheme :—

(i) Raichur District.
(ii) Bellary District.

2. The Regional Intensive Agricultural Development Programmes have been implemented in the following places :—

(1) Kolar (2) Tumkur (3) Chitradurga
(4) Shimoga (5) Bangalore (6) Mysor
(7) North Kanara (8) South Kanara
(9) Belgaum (10) Raichur (11) Bellary
(12) Gulbarga.

(*b*) (i) The only intention of starting the Regional Intensive Agricultural Development programme was and is to increase the production of Food and Agriculture through direct experiment in the areas with resources.

(ii) The Regional Intensive Agricultural Development programmes are started on the basis of irrigational facilities provided and their additional storage capacity.

As a part of Agricultural Development programme, the objective is to intensify the attempts in all the areas where it is advantageous to do so.

(iii) The Regional Intensive Agricultural Development Programme has been started in the following ten districts during the 2nd plan period. They are—

Raichur, Tumkur, Bellary, Mysore, Shimoga, Belgaum, Kolar, Chitradurga, North Kanara and South Kanara.

The scheme was extended to Bangalore and Gulbarga Districts during the first year of 4th plan *i.e.*, in 1969-70.

Regional Intensive Agricultural Development Programme was started in Mandya District on 1st January 1962 and in the T.B.P. area of Raichur and Bellary Districts in 1969-70.

(*c*) There is a proposal to extend the Regional Intensive Agricultural Development programme to all the Districts. At the time of sanctioning the programme, it was proposed to extend it to two Districts in a year. But due to paucity of funds, it could not be done as originally planned. It would be extended to the remaining Chickmagalur, Hassan, Coorg, Bijapur, Dharwar and Bidar Districts, in due course.

The question of extending the small Farmers Development Programmes to other districts will be considered at the time when the Government of India and the State Government take up the matter.

(*d*) Does not arise in view of reply to clause (*c*).

ಶ್ರೀ ಹೆಚ್. ಡಿ. ದೇವೇಗೌಡ :—ಪ್ರಾದೇಶಿಕ ಸಾಂದ್ರ ಬೇಸಾಯ ಯೋಜನೆ ಎಲ್ಲ ಜಿಲ್ಲೆಗಳಿಗೂ ಅನ್ವಯವಾಗುವಂತೆ ಮಾಡಬೇಕೆಂದು ಉತ್ತರದಲ್ಲಿ ಹೇಳಿದ್ದೀರಿ. ಮತ್ತು ಸಾಂದ್ರ ಬೇಸಾಯ ಯೋಜನೆಯಲ್ಲಿ ಜಿಲ್ಲಾಧಿಕಾರಿಗಳು ಮಾಡುವ ಬೇಸಾಯ ಯೋಜನೆಗಳೂ ಇದರಲ್ಲಿ ಅನ್ವಯವಾಗುತ್ತದೆಯೇ ?

‡ಶ್ರೀ ಕೆ. ಹೆಚ್. ಪಾಟೀಲ್ :—ಪ್ರಾದೇಶಿಕ ಸಾಂದ್ರ ಬೇಸಾಯ ಯೋಜನೆ ಎಲ್ಲ ಜಿಲ್ಲೆಗಳಿಗೂ ಅನ್ವಯವಾಗುತ್ತದೆ. ಇದರಲ್ಲಿ ಸಣ್ಣ ಹಿಡವಳಿ ಮಾಡುವ ಬೇಸಾಯ ಯೋಜನೆಯೂ ಅನ್ವಯವಾಗುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿ :—ಸಣ್ಣ ರೈತರ ಯೋಜನೆಯನ್ನು ಇದರಲ್ಲಿ ಸೇರಿಸಲು ಆಗಲಿಲ್ಲ ಎಂದು (೩)ಗೆ ಉತ್ತರವಾಗಿ ಹೇಳಿದ್ದೀರಿ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಣ್ಣ ರೈತರುಗಳೇ ಹೆಚ್ಚಾಗಿರುವುದರಿಂದ ಇವರಿಗೂ ಅನ್ವಯವಾಗುವಂತೆ ಈ ಯೋಜನೆ ಸೇರಿಸಲು ಆಗುವುದಿಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್ :—ಇದರಲ್ಲಿ ಯಾವ ಯಾವ ಜಿಲ್ಲೆಗಳು ಎನ್ನುವುದರ ಹೆಸರುಗಳನ್ನು ಕೊಡಲಾಗಿದೆ; ಉಳಿದ ಜಿಲ್ಲೆಗಳಲ್ಲಿಯೂ ಈ ಯೋಜನೆ ವಿಸ್ತರಿಸಬೇಕೆಂಬೂ ಇದೆ.

ಶ್ರೀ ಜಿ. ಪುಟ್ಟಸ್ವಾಮಿ :—ಚಿಕ್ಕಮಗಳೂರು ಜಿಲ್ಲೆಯನ್ನು ಪ್ರತಿನಿಧಿಸುವ ಮಂತ್ರಿಗಳು ಯಾರೂ ಇಲ್ಲ ಎಂದು ಈ ಸಣ್ಣ ರೈತರ ಬೇಸಾಯ ಯೋಜನೆಯನ್ನು ಇದುವರೆಗೂ ಕಾರ್ಯಗತ ಮಾಡಲಾಗಲಿಲ್ಲ ಮತ್ತು ಇಲ್ಲಿಗೆ ಇತರ ಜಿಲ್ಲೆಗಳಂತೆ ಮಂಜೂರಾತಿ ಕೊಡಲಿಲ್ಲ ಎನ್ನುವುದನ್ನು ಸರಕಾರ ಒಪ್ಪುತ್ತಾರೆಯೇ ?

ಶ್ರೀ ಕೆ. ಹೆಚ್. ಪಾಟೀಲ್ :—ಆ ಜಿಲ್ಲೆ ಪ್ರತಿನಿಧಿಸುವ ಮಂತ್ರಿಗಳಿಲ್ಲ ಎಂದೇನೂ ಅಲ್ಲ. ಆ ರೀತಿ ಈ ಯೋಜನೆ ಮಾಡುತ್ತಿಲ್ಲ, ಹಾಗೆ ಭಾವನೆ ಇಟ್ಟುಕೊಂಡಿಂವುದು ಮಾನ್ಯ ಸದಸ್ಯರ ತಪ್ಪು ಅಭಿಪ್ರಾಯ, ಮಾನ್ಯ ಸದಸ್ಯರು ಈಗ ಸೂಚನೆ ಕೊಟ್ಟಿರುವುದರಿಂದ ಇದನ್ನು ಮುಂದೆ ನೋಡಿಸಬೇಕಾಗುತ್ತದೆ.

ಶ್ರೀ ಎಂ. ವಲ್ಲಪ್ಪ :—(ಈ) ಪ್ರಶ್ನೆಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಹಳಷ್ಟು ಸಣ್ಣ ಹಿಡುವಳಿದಾರರಿದ್ದು ಸಾಕಷ್ಟು ಸಾಲ ಪಡೆಯುವಲ್ಲಿ ಮತ್ತು ಅವರ ಹಣಕಾಸಿನ ಸ್ಥಿತಿಗತಿಯನ್ನು ಸುಧಾರಿಸಿಕೊಂಡು ಒಳ್ಳೆಯ ಫಲ ನೊರಕಿಸಿಕೊಳ್ಳಲು ತಾಂತ್ರಿಕ ಸಲಹೆ ಪಡೆಯುವಲ್ಲಿ ಬಹಳೇ ತೊಂದರೆಗೊಳಗಾಗಿದ್ದ ರೆಂಬುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ ಪ್ರಶ್ನೆಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದಂ ಸರಕಾರದವರು ಹೇಳಿದ್ದಾರೆ, ಇಲ್ಲಿರುವ ಸಣ್ಣ ಹಿಡುವಳಿದಾರರಿಗೆ ತೊಂದರೆ ಇದೆ. ಇದಕ್ಕಾಗಿ ಬೇಸಾಯವನ್ನೇ ಅವಲಂಬಿಸಿರುವವರಿಗೆ ಹೆಚ್ಚು ಬೆಳೆಯಲು ಸಹಾಯ ಮಾಡುವುದು ಸರಕಾರದ ಕರ್ತವ್ಯ. ಇನ್ನೂ ಮೇಲಾದರೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಯೋಜನೆ ಅನ್ವಯವಾಗುವಂತೆ ಮಾಡಿ ಇಲ್ಲಿ ಕೆಲಸಗಳು ಪ್ರಾರಂಭವಾಗುವ ಹಾಗೆ ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :—ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡೇ ಕೆಲಸಗಳನ್ನು ಮಾಡುತ್ತಿದ್ದೇವೆ. (ಇ)ಗೆ ಉತ್ತರ ಕೊಡುವಾಗ ಉದ್ಭವಿಸುವುದಿಲ್ಲ ಎಂದು ಹೇಳಿದರೆ ಅದರಲ್ಲಿ ಸರಕಾರ ಗಮನ ಕೊಟ್ಟಿಲ್ಲ ಎಂದು ಅರ್ಥವಾಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :—ಈ ಯೋಜನೆಯನ್ನು ಯಾವಾಗ ಆರಂಭ ಮಾಡಲಾಯಿತು ಮತ್ತು ಅಲ್ಲಿಂದ ಇಲ್ಲಿಯವರೆಗೆ ಸರಕಾರ ಸಾಧಿಸಿರತಕ್ಕ ಪ್ರಗತಿ ಏನು ? ಮತ್ತು ಇದಕ್ಕಾಗಿ ಇಷ್ಟು ಖರ್ಚು ಮಾಡಿರುವುದರಿಂದ ಇದರ ಫಸಿಕಲ್ ಮತ್ತು ಫೈನಾನ್‌ಷಿಯಲ್ ಪ್ರೋಗ್ರೆಸ್ ಬಗ್ಗೆ ಉತ್ತರ ಕೊಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :—೧೯೬೯-೭೦ರಲ್ಲಿ ಇದರ ಸ್ಕೀಂ ಮಂಜೂರಾಯಿತು. ಮತ್ತು ಇದರ ಖರ್ಚು ಏನಾಗಿದೆ ಎನ್ನುವ ವಿವರಗಳನ್ನು ತಿಳಿಸಲು ನನ್ನ ಹತ್ತಿರ ಈಗ ಆದರ ಅಂಕಿ ಸಂಖ್ಯೆಗಳು ಇಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ :—ಇದರಲ್ಲಿ ಹಾಸನ ಜಿಲ್ಲೆ ಕೂಡ ಇಲ್ಲ, ಇದನ್ನು ಈ ಯೋಜನೆಗೆ ಸೇರಿಸಲು ಪರಿಶೀಲಿಸುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :—ಸರಕಾರ ಎಲ್ಲಾ ಜಿಲ್ಲೆಗಳಿಗೂ ಈ ಯೋಜನೆಯನ್ನು ಅಳವಡಿಸ ಬೇಕೆಂದು ಒಂದು ವರ್ಷಕ್ಕೆ ಎರಡೆರಡು ಜಿಲ್ಲೆಗಳಂತೆ ಆರಿಸಿಕೊಂಡು ಕೆಲಸ ಮಾಡಬೇಕೆಂದು ಇದೆ. ನಿಯಮಗಳಿಗನುಸಾರವಾಗಿ ಸೆಂಟ್ರಲ್ ಗವರ್ನಮೆಂಟು ಒಪ್ಪುವ ರೀತಿಯಲ್ಲಿ ಇದರ ಕೆಲಸಗಳನ್ನು ಮಾಡ ಬೇಕೆಂದು ಇದೆ, ಮತ್ತು ಇದೇ ವಿಚಾರದಲ್ಲಿ ಈಗ ಕೇಂದ್ರ ಸರಕಾರದೊಡನೆ ವಿಚಾರ ವಿನಿಮಯ ಮಾಡುತ್ತಿದ್ದೇವೆ ಮತ್ತು ನಮ್ಮ ಅಭಿಪ್ರಾಯಗಳನ್ನು ಒಪ್ಪಿದರೆ ಆಗ ಎಲ್ಲ ಜಿಲ್ಲೆಗಳಲ್ಲೂ ಈ ಯೋಜನೆ ಯನ್ನು ತೆಗೆದುಕೊಳ್ಳಬೇಕನ್ನುವುದೇ ಸರಕಾರದ ಅಭಿಪ್ರಾಯ.

ಶ್ರೀ ಜಿ. ಪುಟ್ಟಸ್ವಾಮಿ :—ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಕೆಲಸಗಳಾಗಿವೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ಕೆ. ಹೆಚ್. ಪಾಟೀಲ್ :—ನೋಟೀಸು ಬೇಕು.

ಶ್ರೀ ಕಾಗೋಡು ತಿಮ್ಮಪ್ಪ :—ಸುಮಾರು ಹನ್ನೆರಡು ಜಿಲ್ಲೆಗಳಲ್ಲಿ ಈ ಯೋಜನೆ ಮಾಡಬೇಕೆಂದು ಹೇಳಿದ್ದಾರೆ, ಇದರಲ್ಲಿ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಕೆ. ಹೆಚ್ ಪಾಟೀಲ್ :—ನನ್ನಲ್ಲಿರುವ ಮಾಹಿತಿ ಪ್ರಕಾರ ಜಿಲ್ಲೆಗಳ ಹೆಸರುಗಳನ್ನು ಮಾತ್ರ ಕೊಡಲಾಗಿದೆ, ಇದು ಇತರ ಜಿಲ್ಲೆಗಳಿಗೂ ಅನ್ವಯ ಮಾಡಬೇಕೆಂಬುದೇ ನನ್ನ ಅಭಿಪ್ರಾಯ.

ಶ್ರೀ ಎಂ ಹೆಚ್ ಜಯಪ್ರಕಾಶನಾರಾಯಣ್ :—ಸಾಂದ್ರ ಬೇಸಾಯ ಯೋಜನೆಗೆ ಹಾಗೂ ಸಣ್ಣ ರೈತರು ಮಾಡತಕ್ಕ ಯೋಜನೆಗಳಿಗಾಗಿ ಕೇಂದ್ರದಿಂದ ಬಹಳ ದುಡ್ಡು ಬಂದರೂ ಸಹ ಈಗಿರುವ ಯೋಜನೆ ಗಳಂತೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಇದು ಬರೀ ಅಂಕಿ ಅಂತಗಳ ಯೋಜನೆ ಆಗಿದೆ.

ಇದರಿಂದ ಬಡವರಿಗೆ ಸ್ವಲ್ಪ ಭಾಗ ಮೀಸಲು ಇಡಬೇಕು, ಆದ್ದರಿಂದ ನಿಮ್ಮ ರಿಸೋರ್ಸಸ್ ನೋಡಿಕೊಂಡು ಬಡವರಿಗಾಗಿ ಇಂತಹ ನೀತಿ ಇದೆ ಎಂದು ಪ್ರಕಟಿಸಿ ಅದನ್ನು ಜಾರಿಗೆ ಕೊಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್ :—ಈ ಯೋಜನೆ ಇರುವುದೇ ಬಡವರಿಗಾಗಿ, ಬಡವರಿಗೆ ಬೇರಾವ ಯೋಜನೆಯೂ ಇಲ್ಲ.

SRI M. H. JAYAPRAKASH NARAYAN :—Can the Government make it apoint to reserve certain percentage of amount for the weaker sections of society. *viz.*, the Schedule Castes, the Schedule Tribes and the Backward classes ?

ಶ್ರೀ ಕೆ. ಹೆಚ್. ಪಾಟೀಲ್ :—ಈ ಯೋಜನೆಗಳನ್ನು ಬಡವರಿಗಾಗಿಯೇ ಮಾಡುವುದು ಅದಲ್ಲದೆ ಬೇರೆ ಯಾವ ಗುರಿಯೂ ಇಲ್ಲ. ಮಾನ್ಯ ಸದಸ್ಯರಿಗೆ ಇದು ಚೆನ್ನಾಗಿ ಗೊತ್ತಿದ್ದರೆ, ಮತ್ತೆ ಇಲ್ಲಿ ಪ್ರಶ್ನೆ ಹಾಕಿ ಉತ್ತರ ಕೇಳುವ ಅವಶ್ಯಕತೆಯೇ ಇರಲಿಲ್ಲ.

## IRREGULAR RUNNING OF BUSES BETWEEN BANGALORE AND KANAKAPURA

469. SRI S. KARIAPPA (Kanakapura).—

Will the Minister for Labour be pleased to state :—

(*a*) whether Government has received complaints regarding irregular running of M S.R.T.C. Buses between Bangalore and Kanakapura ;

(*b*) if so, the action taken in the matter ;

(*c*) if not, the reason for the same ?

SRI AZEEZ SAIT (Minister for Labour).—

(*a*) Yes.

(*b*) Strict instructions have been issued to the concerned to ensure regular operation of services and also M.S.R.T.C. has increased the services.

(*c*) Does not arise in view of the reply to clause (*b*) above.

ಶ್ರೀ ಎಸ್. ಕರಿಯಪ್ಪ :—ಇಲ್ಲಿನ ಬಸ್ಸುಗಳು ಸರಿಯಾಗಿ ಸಮಯಕ್ಕೆ ಹೊರಟು ಸೇರುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

†ಶ್ರೀ ಅಜೀಜ್ ಸೇಟ್ :—ಕನಕಪುರದ ಕಡೆ ಹೋಗುವ ಬಸ್ಸುಗಳ ಬಗ್ಗೆ ಕಟ್ಟುನಿಟ್ಟಾದ ಸೂಚನೆಗಳನ್ನು ಕೊಡಲಾಗಿದೆ. ಇಂತಹ ತಪ್ಪುಗಳು ಆಗಬಾರದು ಎಂದು ಸರಕಾರ ಇದನ್ನು ಗಮನದಲ್ಲಿಟ್ಟು ಕೊಂಡು ಸೂಕ್ತ ಎಚ್ಚರಿಕೆಗಳನ್ನು ಕೊಡಲಾಗಿದೆ.

ಶ್ರೀ ಎಸ್. ಕರಿಯಪ್ಪ :—ರಾಷ್ಟ್ರೀಕರಣವಾಗುವುದಕ್ಕೆ ಮೊದಲು ಇಲ್ಲಿ ಓಡಾಡುತಿದ್ದ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು ? ಮತ್ತು ಈಗ ಸರಕಾರ ಹಾಕಿರುವ ಬಸ್ಸುಗಳು ಎಷ್ಟು ಮತ್ತು ಹೆಚ್ಚಿಗೆ ಹಾಕಿರುವ ಬಸ್ಸುಗಳು ಎಷ್ಟು ? ರಾಷ್ಟ್ರೀಕರಣವಾದ ನಂತರ ಎಷ್ಟು ಬಸ್ಸುಗಳ ಸಂಖ್ಯೆಯನ್ನು ಹೆಚ್ಚು ಮಾಡಲಾಗಿದೆಯೇ ?